# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.


---

ವಿಷಯ: ಕವಿಪ್ರನಿನಿ ಮತ್ತು ವಿಸಕಂಗಳು ವಿಳಂಬವಾಗಿ ಪಾವತಿಸುವ ವಂತಿಗೆ ಮೇಲೆ ಬಡ್ಡಿಯನ್ನು ವಿಧಿಸುವ ಕುರಿತು

ಉಲ್ಲೇಖ: 1. ದಿನಾಂಕ 28.06.2021ರಂದು ನಡೆದ 46ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಡವಳಿ ಸಂಖ್ಯೆ. ಕೆಇಪಿಜಿಟಿ/ಪಿಜಿ11/2021-22 ಸಿವೈಎಸ್-09 ದಿನಾಂಕ 12.07.2021.

2. ದಿನಾಂಕ 09.03.2006ರಂದು ಕವಿಪ್ರನಿನಿ/ವಿಸಕಂಗಳ ಆರ್ಥಿಕ ಸಲಹೆಗಾರರು ಹಾಗೂ ಕವಿಪ್ರನಿನಿ/ವಿಸಕಂಗಳ ಪಿಂಚಣಿ ಟ್ರಸ್ಟ್ ಮತ್ತು ಕವಿಪ್ರನಿನಿ/ವಿಸಕಂಗಳ ಉಪದಾನ ಟ್ರಸ್ಟ್‌ಗಳ ನಡುವೆ ನಡೆದ ಒಡಂಬಡಿಕೆ.

**********

**ಪೀಠಿಕೆ:**

1. ದಿನಾಂಕ 09.03.2006ರಂದು ಕವಿಪ್ರನಿನಿ, ಬೆವಿಕಂ, ಗುವಿಕಂ, ಹುವಿಕಂ, ಮವಿಕಂ ಮತ್ತು ಚಾವಿಸನಿಗಳ ಆರ್ಥಿಕ ಸಲಹೆಗಾರರು ಟ್ರಸ್ಟ್ ಕಾಲಕಾಲಕ್ಕೆ ನಿಗದಿಪಡಿಸಿದ ವಂತಿಗೆ ದರಗಳನ್ವಯ ನಂತರದ ತಿಂಗಳಿನ 7ನೇ ದಿನಾಂಕದೊಳಗೆ ಪಿಂಚಣಿ ಮತ್ತು ಉಪದಾನ ವಂತಿಗೆಯನ್ನು ತಪ್ಪದೇ ಟ್ರಸ್ಟ್‌ಗೆ ಪಾವತಿಸುವುದಾಗಿ ಕವಿಪ್ರನಿನಿ/ವಿಸಕಂಗಳ ಪಿಂಚಣಿ ಟ್ರಸ್ಟ್ ಮತ್ತು ಕವಿಪ್ರನಿನಿ/ವಿಸಕಂಗಳ ಉಪದಾನ ಟ್ರಸ್ಟ್‌ಗಳ ನಡುವೆ ಒಡಂಬಡಿಕೆಯಾಗಿರುತ್ತದೆ. ಅಲ್ಲದೆ, ವಿಳಂಬವಾಗಿ ಪಾವತಿ ಮಾಡಿದ ವಂತಿಗೆಗೆ ಟ್ರಸ್ಟ್ ನಿರ್ಧರಿಸಿದ ದರಗಳಲ್ಲಿ ಬಡ್ಡಿಯನ್ನು ಸಂಬಂಧಪಟ್ಟ ಕವಿಪ್ರನಿನಿ ಮತ್ತು ವಿಸಕಂಗಳು ಪಾವತಿಸಬೇಕಿರುತ್ತದೆ.

2. ದಿನಾಂಕ 28.06.2021ರಂದು ನಡೆದ 46ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಡವಳಿ ವಿಷಯ ಸಂಖ್ಯೆ 4.3ರಲ್ಲಿ ಕವಿಪ್ರನಿನಿ ಮತ್ತು ವಿಸಕಂಗಳು ವಿಳಂಬವಾಗಿ ಪಾವತಿಸುವ ವಂತಿಗೆ ಮೇಲೆ ಬಡ್ಡಿಯನ್ನು ವಿಧಿಸುವ ಕುರಿತು ಈ ಕೆಳಗಿನಂತೆ ನಿರ್ಣಯಿಸಲಾಗಿರುತ್ತದೆ.

*ಕವಿಪ್ರನಿನಿ/ವಿಸಕಂಗಳಲ್ಲಿ ವಂತಿಗೆ ಪಾವತಿಯಲ್ಲಿ ಶಿಸ್ತುಬದ್ಧತೆಯನ್ನು ರೂಢಿಸುವ ಹಾಗೂ ಬಡ್ಡಿ ನಷ್ಟವನ್ನು ತಡೆಯುವ ದೃಷ್ಟಿಯಿಂದ ಒಡಂಬಡಿಕೆಯಲ್ಲಿ ತಿಳಿಸಿದಂತೆ, ವಿಳಂಬವಾಗಿ ಪಾವತಿ ಮಾಡಿದ ಮಾಸಿಕ ವಂತಿಗೆಗೆ ವಾಸ್ತವಿಕವಾಗಿ ವಿಳಂಬವಾದ ದಿನಗಳಿಗೆ 1%ರಂತೆ ಪ್ರತಿ ಮಾಹೆಗೆ ಕನಿಷ್ಟ ₹ 1000/-ಗಳಿಗೆ ಒಳಪಟ್ಟು ಸರಳ ಬಡ್ಡಿಯನ್ನು ವಿಧಿಸುವ*

*ಹಾಗೂ*

*ಜಂಟಿ ಸಮನ್ವಯ/ಪರಿಷ್ಕೃತ ವಂತಿಗೆ ದರದ ವ್ಯತ್ಯಾಸದ ಬಾಕಿ ಮೊತ್ತ ಪಾವತಿಗೆ ಸಂಬಂಧಿಸಿದಂತೆ, ಸಮನ್ವಯ ಅಂತಿಮಗೊಂಡ/ಪರಿಷ್ಕೃತ ವಂತಿಗೆ ದರದ ಪರಿಷ್ಕರಣೆ ಆದೇಶದ ದಿನಾಂಕದ ಒಂದು ತಿಂಗಳ ನಂತರ ವಿಳಂಬವಾದ ದಿನಗಳಿಗೆ 1%ರಂತೆ ಪ್ರತಿ ಮಾಹೆಗೆ ಕನಿಷ್ಟ ₹ 1000/-ಗಳಿಗೆ ಒಳಪಟ್ಟು ಸರಳ ಬಡ್ಡಿಯನ್ನು ವಿಧಿಸುವ ಮತ್ತು ಈ ಬಡ್ಡಿ ಮೊತ್ತವನ್ನು ನಂತರದ ತಿಂಗಳ ವಂತಿಗೆ ಪಾವತಿ ಜೊತೆ ಟ್ರಸ್ಟ್‌ಗೆ ಪಾವತಿಸುವ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಲಾಗಿ, ಸಭೆಯು ಚರ್ಚೆಯ ತರುವಾಯ ಈ ಪ್ರಸ್ತಾವನೆಯನ್ನು ಅನುಮೋದಿಸಿತು.*

**ಆದ್ದರಿಂದ ಈ ಆದೇಶ,**

**ಆದೇಶ ಸಂಖ್ಯೆ. ಕೆಇಪಿಜಿಟಿ/ಪಿಜಿ11/2021-22/** Cys-11 **ದಿನಾಂಕ** 16 JUL 2021

ಪೀಠಿಕೆಯಲ್ಲಿ ತಿಳಿಸಿದ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯಲ್ಲಿ ನಿರ್ಣಯಿಸಿದಂತೆ, ವಿಳಂಬವಾಗಿ ಪಾವತಿ ಮಾಡಿದ ಮಾಸಿಕ ವಂತಿಗೆಗೆ ವಾಸ್ತವಿಕವಾಗಿ ವಿಳಂಬವಾದ ದಿನಗಳಿಗೆ 1%ರಂತೆ ಪ್ರತಿ ಮಾಹೆಗೆ ಕನಿಷ್ಟ ₹ 1000/-ಗಳಿಗೆ ಒಳಪಟ್ಟು ಸರಳ ಬಡ್ಡಿಯನ್ನು ವಿಧಿಸಲು ಹಾಗೂ ಜಂಟಿ ಸಮನ್ವಯ/ಪರಿಷ್ಕೃತ ವಂತಿಗೆ ದರದ ವ್ಯತ್ಯಾಸದ ಬಾಕಿ ಮೊತ್ತ ಪಾವತಿಗೆ ಸಂಬಂಧಿಸಿದಂತೆ, ಸಮನ್ವಯ ಅಂತಿಮಗೊಂಡ/ಪರಿಷ್ಕೃತ ವಂತಿಗೆ ದರದ ಪರಿಷ್ಕರಣೆ ಆದೇಶದ ದಿನಾಂಕದ ಒಂದು ತಿಂಗಳ ನಂತರ ವಿಳಂಬವಾದ ದಿನಗಳಿಗೆ 1%ರಂತೆ ಪ್ರತಿ ಮಾಹೆಗೆ ಕನಿಷ್ಟ ₹ 1000/-ಗಳಿಗೆ ಒಳಪಟ್ಟು ಸರಳ ಬಡ್ಡಿಯನ್ನು ವಿಧಿಸಲು ಆದೇಶಿಸಿದೆ.

ಮೇಲೆ ತಿಳಿಸಿದಂತೆ, ಬಡ್ಡಿ ಮೊತ್ತವನ್ನು ನಂತರದ ತಿಂಗಳ ವಂತಿಗೆ ಪಾವತಿ ಜೊತೆ ಟ್ರಸ್ಟ್‌ಗೆ ಪಾವತಿಸುವುದು.

ಈ ಆದೇಶವು ಜುಲೈ-2021ರ ಮಾಹೆಯಿಂದ ಜಾರಿಗೆ ಬರುತ್ತದೆ.

ಆರ್ಥಿಕ ಸಲಹೆಗಾರರು & ವ್ಯವಸ್ಥಾಪಕ ಟ್ರಸ್ಟಿ
ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

ಅಧ್ಯಕ್ಷರು (ಪಿಂ & ಉ ಟ್ರಸ್ಟ್) ಮತ್ತು ನಿರ್ದೇಶಕರು(ಹಣಕಾಸು), ಕವಿಪ್ರನಿನಿರವರಿಂದ ಅನುಮೋದಿಸಲ್ಪಟ್ಟಿದೆ

ಪ್ರತಿಗಳು:

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ
3. ನಿರ್ದೇಶಕರು(ಹಣಕಾಸು), ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.ಎಸ್ಕಾಂ
5. ನಿರ್ದೇಶಕರು(ವಾಣಿಜ್ಯ), ಪಿಸಿಕೆಎಲ್.
6. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂ
7. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ.ಮತ್ತು ಮಾ.ಸಂ)ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com..>eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಎಲ್ಲಾ ಕವಿಪ್ರನಿನಿ/ಎಸ್ಕಾಂ
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಎಲ್ಲ ಕವಿಪ್ರನಿನಿ ಎಸ್ಕಾಂ
3. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು/ಲೆಕ್ಕಾಧಿಕಾರಿಗಳು(ಆಂ.ಪ),ಕವಿಪ್ರನಿನಿ,ಎಸ್ಕಾಂ
4. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:

1. ಶ್ರೀ ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ & ಕವಿಪ್ರನಿನಿ/ಬೆಸ್ಕಾಂ/ಮೆಸ್ಕಾಂ/ಗೆಸ್ಕಾಂ.ಚಾವಿಸನಿನಿ,
2. ಶ್ರೀ ಟಿ.ಎಮ್. ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ನೌಕರರ ಸಂಘ, ಬೆಂಗಳೂರು
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಇಂಜಿನಿಯರುಗಳ ಸಂಘ, ಬೆಂಗಳೂರು
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರುಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.